ರತ್ನಜ, ಮೈಸೂರು

*ಸೊಳ್ಳೆಗಳು ಕಿವಿಯ ಬಳಿ ಬಂದು ಗುಟ್ಟು ಹೇಳುವವರಂತೆ ಗುಂಯ್‌ಗುಡುವ ಕಾರಣವೇನು?*



ಶಿಷ್ಟಾಚಾರ. ಅನ್ನವಿತ್ತ ದೇವನಿಗೆ ಭಕ್ತ ವಂದಿಸುವಂತೆ ಅಂದಿನ ರಕ್ತವಿತ್ತವನಿಗೆ ಥ್ಯಾಂಕ್ಸ್ ಹೇಳುವ ಪರಿಯದು.

ಪಿ. ಜಯವಂತ ಪೈ, ಕುಂದಾಪುರ

*ಮನಿ ಇದ್ದರೂ ನಟಿಯರು ಮಿನಿ ತೊಡುವುದೇಕೆ?*

ಮಿನಿಯಿಂದ ಮನಿ ಮೆಗಾ ಆಗುವುದರಿಂದ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಲ್ಲಿ ಶೇಕಡಾ ಎಷ್ಟು ಮಂದಿ ತಮ್ಮ ಆತ್ಮಸಾಕ್ಷಿಯಾಗಿ ಜನಸೇವೆ ಮಾಡುತ್ತಾರೆ?*

ಕ್ಷಮಿಸಿ; ಚುನಾವಣಾ ಅಭ್ಯರ್ಥಿಗಳಿಗೆ ಆತ್ಮಸಾಕ್ಷಿ ಇರುವಂತಿಲ್ಲ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಬೇರೆಯವರ ಬದುಕಿಗೆ ತಂಪು ನೀಡಲು ನಾವೇನು ಮಾಡಬೇಕು?*

ಸದಾ ತುಂಬಿರುವ ಓವರ್‌ಹೆಡ್ ಟ್ಯಾಂಕ್ ಆಗಬೇಕು.

ನರಸಿಂಹ ಪೈ, ಹೊನ್ನಾವರ

*ಜಲವೇ ಜಗದ ಜೀವ. ಏಕೆ?*



ಜ – ಜತನ; ಲ – ಲವಲವಿಕೆ ಎರಡಕ್ಕೂ ಅದು ಬೇಕಾದ್ದರಿಂದ.

ಸುಜ್ಞಾನಾಚಾರ್ಯ ಕೆ.ಪಿ., ಕಲಿಕೆರೆ

*ಕಷ್ಟ ಬಂದಾಗ ನಾವು ದೇವರನ್ನು ನಿಂದಿಸುವುದು ಏಕೆ?*

ಎಲ್ಲದಕ್ಕೂ ಹೆಂಡತಿಯನ್ನು ಬೈಯಲಾಗುವುದಿಲ್ಲವಲ್ಲ!

ಪ್ರಶಾಂತ್ ಮಯ್ಯ, ಸಾಗರ

*ಸತ್ತವರನ್ನು ಸ್ವರ್ಗಸ್ಥರಾದರು ಎಂದೇಕೆ ಹೇಳುವರು? ನರಕಸ್ಥರೂ ಆಗಿರಬಹುದಲ್ಲವೆ?*

ಭಾರತೀಯರಿಗಂತೂ ಇದೇ ಸರಿ. ಇಲ್ಲಿನ ರಾಜಕಾರಣಿಗಳಿಂದ ಬಿಡಿಸಿಕೊಂಡು ಎಲ್ಲಿ ಹೋದರೂ ಅದು ಸ್ವರ್ಗವೇ.

ಎಸ್.ಎ. ಮೋಹನರಾಜು, ಶಿವಮೊಗ್ಗ

*ಇಂದು ನನಗೆ... ನಾಳೆ ನಿನಗೆ... ಇದರ ಒಳ ಅರ್ಥ ತಿಳಿಸುವಿರಾ ರಾಮ್‌ಜೀ?*

ಎಲ್ಲ ದಿನಗಳೂ 'ಇಂದು'ವೇ ಆಗಿರುವುದರಿಂದ ನಿನಗೆ ಚಿಪ್ಪೇ ಗಟ್ಟಿ ಎಂದು.

ಎ. ಕೃಷ್ಣಾನಂದಶೆಟ್ಟಿ, ಮಂಗಳೂರು

*ಆತ್ಮ ಶುದ್ಧವಾಗಬೇಕಾದರೆ ಯಾವ ಸಾಬೂನಿನಿಂದ ಹೃದಯ ತೊಳೆಯಬೇಕು ದೇವ?*

ಹ್ಯುಮಾನಿಟಿ ಕಂಪನಿಯವರ ಶುದ್ಧ್ ಪ್ರೇಮ್ ಸೋಪ್ ಬಳಸಿರಿ.

ಹೆಚ್.ಆರ್. ಕೊಳಗಿ, ಸಾಗರ

*‘ಈ ದಿನ ಮದ್ಯ ಮಾರಾಟ ಬಂದ್’ ಆದೇಶದ ಬದಲು ‘ಮದ್ಯಪಾನ ಬಂದ್’ ಆದೇಶ ಏಕಿಲ್ಲ?*

ಅಂಗಡಿಗೆ ಬೀಗ ಹಾಕಬಹುದು, ಬಾಯಿಗೆ ಬೀಗ ಹಾಕುವಂತಿಲ್ಲವಲ್ಲ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಸತ್ತವರನ್ನು ಮೇಲೆ ಹೋದರು ಎನ್ನುವರಲ್ಲ, ಏಕೆ?*

ಮೇಲೆ ಹೋಗುವರಲ್ಲ – ಬೊಂಬಿನ ಮೇಲೆ, ಚಟ್ಟದ ಮೇಲೆ, ಸ್ಟ್ರೆಚರ್ ಮೇಲೆ, ಭುಜದ ಮೇಲೆ.....

ತಲಕಾಡು ಶ್ರೀನಿಧಿ, ಬೆಂಗಳೂರು

*ನ ಸ್ತ್ರೀ ಸ್ವಾತಂತ್ರ್ಯಮ್ ಅರ್ಹತಿ ಎನ್ನುವುದನ್ನು ಈಗ ಏನೆಂದು ಬದಲಿಸಬೇಕು ಗುರುಗಳೆ?*

ಸೀರಿಯಲ್ ಸ್ತ್ರೀ ಕುತಂತ್ರಮ್ ಅರ್ಹತಿ ಎಂದು!

ವೀಣಾ ರವಿ ಪೈ, ಕಾಸರಕೋಡ

*ಅಂಗೈಯಗಲದ ಮೊಬೈಲ್‌ಗೆ ಎಲ್ಲಿಲ್ಲದ ಬೇಡಿಕೆಯೇಕೆ?*

ಜಗದಗಲವನ್ನು ಮೊಗದಡಿಗೆ ತರುತ್ತದಲ್ಲ!

ಆರತಿ ಘಟಿಕಾರ್, ದುಬೈ

*ಜೀವನದಲ್ಲಿ ನಾವು ಗಡಿಯಾರದ ಹಂಗಿಲ್ಲದೆ ಕಳೆಯುವ ಘಳಿಗೆಗಳು ಯಾವುವು?*

ವೇಳೆ ನೋಡಲು ಕಲಿಯುವುದಕ್ಕೆ ಮುಂಚಿನ ಮತ್ತು ಕೋಮಾಗೆ ಜಾರಿದ ಘಳಿಗೆಗಳು.

## ಬಹುಮಾನಿತ ಪ್ರಶ್ನೆ

ವಿ.ಎಂ.ಎಸ್. ಶ್ಯಾನುಭಾಗ, ಕುಂದಾಪುರ

*ಸ್ತ್ರೀಯನ್ನು (ಅಹಲ್ಯೆ) ತುಳಿದು ಉದ್ಧರಿಸಿದ ಶ್ರೀರಾಮ; ಸ್ತ್ರೀಯರೊಡನೆ ನಲಿದು ಉದ್ಧರಿಸಿದ ಶ್ರೀಕೃಷ್ಣ. ನಮಗೆ ಯಾರು ಆದರ್ಶರು?*

ಕಲಿಗಾಲಕ್ಕೆ ಅವರಿಬ್ಬರೂ ಅಲ್ಲ; ಸ್ತ್ರೀಯನ್ನು ತಲೆಯ ಮೇಲೆ ಕೂರಿಸಿಕೊಂಡ ಈಶ್ವರನೇ.

ವಿ.ಎಸ್. ಹಿಂದೂಪುರ, ಬಳ್ಳಾರಿ

*ಬಡತನ ಬುದ್ಧಿ ಕಲಿಸುತ್ತದೆ, ಸಿರಿತನ ಬುದ್ಧಿ ಕೆಡಿಸುತ್ತದೆ ಎನ್ನುವುದು ನಿಜವೇ ಸ್ವಾಮಿ?*

ಇಂದಿನ ಮಾತೇ ಬೇರೆ. ಕಷ್ಟ ಬಂದಾಗ ಬಡವರು ಮನಕ್ಕೆ ಬುದ್ಧಿ ಹೇಳುತ್ತಾರೆ; ಸಿರಿವಂತರು ಕಾಲಿಗೆ!

ಜಯಲಕ್ಷ್ಮಿ, ಮೈಸೂರು

*ಲಗ್ನವಾದ ಹೊಸದರಲ್ಲಿ ದಂಪತಿ ಜೊತೆಜೊತೆ; ಮಧ್ಯವಯದಲ್ಲಿ ಪತಿ ಮುಂದೆ; ವೃದ್ಧಾಪ್ಯದಲ್ಲಿ ಸತಿ ಮುಂದೆ. ಏಕೆ?*

ಏಕೆಂದರೆ ಸತಿಗೆ ಪತಿ ಮೊದಲಿಗೆ ವರ್ತಮಾನ, ಮಧ್ಯವಯದಲ್ಲಿ ಭವಿಷ್ಯ, ಕಡೆಗಾಲದಲ್ಲಿ ಭೂತ.

ಎಚ್. ಆರ್. ಕಡಿವಾಲ, ಬದಾಮಿ

*ತಂಬಾಕು ಆರೋಗ್ಯಕ್ಕೆ ಹಾನಿಕರ ಎಂದು ಪ್ಯಾಕ್ ಮೇಲೆ ಬರೆದರೂ ಸಹ ಸಿಗರೇಟ್ ಸೇದುತ್ತಾರಲ್ಲ, ಯಾಕೆ?*




ಆ ಬರಹವನ್ನು ಮೊದಲಿಗೆ ಸೇದುವ ಆತುರ, ನಂತರ ಸಿಗರೇಟ್ ಹೊಗೆ ಮುಚ್ಚಿಬಿಡುವುದಂತೆ.

ಕೆ.ಯಂ. ವೀರೇಶ್, ಕೂಡ್ಲಿಗಿ

*ನೀವು ಸದಾ ಹೀಗೆ ಪ್ರಶ್ನೆಗಳಿಗೆ ಉತ್ತರಿಸುತ್ತಾ ಕುಳಿತರೆ ಹೇಗೆ? ನಾಡಿನ ಶ್ರೇಯೋಭಿವೃದ್ಧಿಗಾಗಿ ಏನಾದರೂ ಸಲಹೆ ನೀಡಿ...*

ನಾಡಿನ ಒಳಿತಿಗಾಗಿ ಪ್ರತಿಯೊಂದೂ ಸ್ಪಷ್ಟವಾಗಿ ತಿಳಿಯುವವರೆಗೆ ಪ್ರಶ್ನಿಸುತ್ತಲೇ ಇರಿ.

ನವಿರವಿ, ಬಾಳೆಹೊನ್ನೂರು

*ಬ್ರಹ್ಮನಿಗೇಕೆ ಮೂರು ತಲೆ?*

ಮೂರು ಹೊತ್ತೂ ಕೆಲಸ ಮಾಡುವುದರಿಂದ ಒಂದೊಂದು ಷಿಫ್ಟ್‌ಗೆ ಒಂದೊಂದನ್ನು ಬಳಸಲು.

■ ರಾಮ್